## ಬಳ್ಳಾರಿ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ

**2194:** ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):– ಮಾನ್ಯ ಉಪ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ 6000 ಎಕರೆಗೆ ನೀರೊದಗಿಸುವ ಎಲ್ಬಿ– ಕಗ್ಗಲ್ ಏತ ನೀರಾವರಿ ಯೋಜನೆಯನ್ನು 93–94ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿದೆಯೇ;

ಆ) ಇಲ್ಲದಿದ್ದಲ್ಲಿ ಯಾವಾಗ ತೆಗೆದುಕೊಳ್ಳಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

**ಅ)** ಸೇರಿಸಿಲ್ಲ.

**ಆ)** ಯೋಜನೆಯು ಇನ್ನೂ ಅನ್ವೇಷಣೆ ಹಂತದಲ್ಲಿದೆ.

## ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ

**2196:** ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):– ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು.ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದ ವತಿಯಿಂದ 1993–94ರ ಆಯವ್ಯಯದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಒದಗಿಸಲಾದ ಹಣವೆಷ್ಟು;

ಆ) ಚಾಲ್ತಿಯಲ್ಲಿರುವ ಕೆಲಸಗಳನ್ನು ಪೂರ್ಣಗೊಳಿಸಲಾಗುವುದೇ;

ಇ) ಹೊಸ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದೇ ?

ಶ್ರೀ ರಂಗದೇವರಾಯುಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

**ಅ)** ರೂ. 66.22 ಕೋಟಿ.

**ಆ)** ಹಣ ಲಭ್ಯವಾದರೆ ಚಾಲ್ತಿಯಲ್ಲಿರುವ ಕೆಲಸಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲಾಗುವುದು.

**ಇ)** ಇದನ್ನು ಮಂಡಳಿಯು ನಿರ್ಧರಿಸುವುದು.

## ಗಡಿ ಪ್ರದೇಶಾಭಿವೃದ್ಧಿಗೆ ಮಂಜೂರಾದ ಹಣ

**2197:** ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):– ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1990–91ರಲ್ಲಿ 12.00ಲಕ್ಷ ಪ್ರತಿ ತಾಲ್ಲೂಕಿಗೆ ಮತ್ತು 1991–92ರಲ್ಲಿ 25.00ಲಕ್ಷ ರೂಪಾಯಿಗಳು ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಾಗಿದ್ದು ಈ ವರ್ಷ 50.00 ಲಕ್ಷ ರೂಪಾಯಿಗೂ ಹೆಚ್ಚಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ರಂಗದೇವರಾಯುಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಇಲ್ಲ.